**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.**

**ಸಿ.ಸಿ. ಸಂಖ್ಯೆ:646/2020**

| | |
|---|---|
| ಫ್ರಾಸಾ | 2 |
| ಚಾಸಾ | 2 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 05.07.2025.**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುಳಮ್ಮ |
| ಗಂಡನ ಹೆಸರು | : | ದೇವರಾಜು |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ನಿಮ್ಮಕಾಯಲಪಲ್ಲಿ |

**(3 ಮತ್ತು 5ನೇ ಆರೋಪಿತರು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪತರ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಚಾಸಾ-1 ನನ್ನ ಗಂಡ ಮತ್ತು ಚಾಸಾ-3 ನನ್ನ ಮಗ. 4 ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ಆರೋಪಿತರು ಬಂದು ನನಗೆ ನನ್ನ ಗಂಡ ಮತ್ತು ನನ್ನ ಮಗನಿಗೆ ಹಲ್ಲೆ ಮಾಡಿದರು. ನನ್ನ ಗಂಡನಿಗೆ ನರೇಶ, ಹರೀಶ ಮತ್ತು ಸುಬ್ಬಿರೆಡ್ಡಿ ಹಲ್ಲೆ ಮಾಡಿದರು. ನನ್ನ ಮಗನ ಮೂತಿಯ ಮೇಲೆ ಹಲ್ಲೆ ಮಾಡಿದರು. ನರೇಶ ನನ್ನ ಮೇಲೆ ಹಲ್ಲೆ ಮಾಡಿದರು. ನರೇಶ, ಹರೀಶ ಮತ್ತು ಮಂಜು ಎಂಬುವವರು ಕಲ್ಲಿನ ಮೂಲಕ ಚಾಸಾ-1 ರವರ ತಲೆಗೆ

ಹಲ್ಲೆ ಮಾಡಿದರು. ಮುದ್ದೆಮಾಲು-1 ರಿಂದ 5 ರಿಂದಲೇ ಆರೋಪಿತರು ಹಲ್ಲೆ ಮಾಡಿರುವುದಾಗಿ ನುಡಿಯುತ್ತಾರೆ. ನಂತರ ನಾನು ಮೂರ್ಛೆ ತಪ್ಪಿದೆ. ಅನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ಪೋಲಿಸರು ನಂತರ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದರು.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿನಾಂಕ 23.07.2020 ರಂದು ಬೆಳಿಗ್ಗೆ 10.00 ಗಂಟೆಯ ಸಮಯದಲ್ಲಿ ಸ.ನಂ.6 ರಲ್ಲಿ ಚಾಸಾ-1, ಚಾಸಾ-4 ಮತ್ತು 5 ರವರು ಕಡಲೆ ಕಾಯಿ ಬೆಳೆಗೆ ಗುಟುವಾ ಹಾಕುತ್ತಿದ್ದಾಗ, ಆರೋಪಿತರು ಸಮಾನ ಉದ್ದೇಶದಿಂದ ಚಾಸಾ-1 ರವರ ಜಮೀನಿನ ಒಳಗೆ ಅಕ್ರಮ ಪ್ರವೇಶ ಮಾಡಿ ಚಾಸಾ-4 ಮತ್ತು 5 ರವರನ್ನು ಏಕೆ ಜಮೀನಿನ ಒಳಗೆ ಬರಮಾಡಿಕೊಂಡಿದ್ದೀರಿ ಎಂದು ಜಗಳ ತೆಗೆದರು ಎಂದರೆ ಸರಿ. ಆ ಪೈಕಿ 2 ನೇ ಆರೋಪಿಯು ಈಗ ತೋರಿಸಿದ ಕಲ್ಲಿನಿಂದ ಚಾಸಾ-1 ರವರ ತಲೆಯ ಮೇಲ್ಭಾಗಕ್ಕೆ ಹೊಡೆದು ರಕ್ತಗಾಯಮಾಡಿದರು ಎಂದರೆ ಸರಿ. 1 ನೇ ಆರೋಪಿಯು ಕಲ್ಲಿನಿಂದ ಚಾಸಾ-1 ರವರ ಎಡಗಾಲಿನ ತೊಡೆಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿ. 3 ನೇ ಆರೋಪಿಯು ಕೈ ಉಗುರುಗಳಿಂದ ಚಾಸಾ-1 ರವರ ಹೊಟ್ಟೆಯ ಬಲಭಾಗಕ್ಕೆ ಪರಚಿದರು ಎಂದರೆ ಸರಿ. 5 ನೇ ಆರೋಪಿಯು ಚಾಸಾ-1 ರವರ ಕೊರಳ ಪಟ್ಟಿ ಹಿಡಿದು ಎಳೆದಾಡಿದರು ಎಂದರೆ ಸರಿ. 6 ಮತ್ತು 8 ನೇ ಆರೋಪಿತರು ಚಾಸಾ-1 ರವರ ಬೆನ್ನಿನ ಹಿಂಭಾಗಕ್ಕೆ ಹೊಡೆದರು ಎಂದರೆ ಸರಿ. 3 ನೇ ಆರೋಪಿಯು ಚಾಸಾ-1 ರವರಿಗೆ

ಕಾಲುಗಳಿಂದ ಒದ್ದು, ಕೈಗಳಿಂದ ಹೊಡೆದರು ಎಂದರೆ ಸರಿ. 2 ನೇ ಆರೋಪಿಯು ಚಾಸಾ-1 ರವರಿಗೆ ಕಾಲಿನಿಂದ ಒದೆಯುವಾಗ, ನಾನು ಮತ್ತು ಚಾಸಾ-3 ರವರು ಜಗಳ ಬಿಡಿಸಲು ಬಂದಿದ್ದು, ಆಗ ನನಗೆ ಮತ್ತು ಚಾಸಾ-3 ರವರಿಗೆ ಆರೋಪಿತರೆಲ್ಲರೂ ಅವಾಚ್ಯ ಶಬ್ಧಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ಪೋಲಿಸರು ನನ್ನ ಮರುಹೇಳಿಕೆ ಪಡೆದರು ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಸಿ.ವಿ.ಎನ್. ವಕೀಲರಿಂದ, ಆರೋಪಿತರ ಪರವಾಗಿಃ**

ಆರೋಪಿಗಳು ಹಾಗೂ ನಾವು ದಾಯಾದಿಗಳು ಎಂದರೆ ಸರಿ. ನಮ್ಮ ಹಾಗೂ ಆರೋಪಿಗಳ ಜಮೀನುಗಳು ಅಕ್ಕಪಕ್ಕದಲ್ಲಿವೆ ಎಂದರೆ ಸರಿ. ನೀರಿನ ಶೆಡ್ಡು ನಿರ್ಮಿಸಲು ತೋಟಗಾರಿಕೆ ಇಲಾಖೆಯಿಂದ ಚಾಸಾ-1 ರವರು ಅನುದಾನ ಪಡೆದಿದ್ದು, ಚಾಸಾ-1 ರವರು ಆರೋಪಿತರ ಸ್ವತ್ತನ್ನು ಒತ್ತುವರಿ ಮಾಡಿ ಮಣ್ಣನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಆರೋಪಿತರು ತೋಟಗಾರಿಕೆ ಇಲಾಖೆಗೆ ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಯಾವ ಸರ್ವೇ ನಂಬರಿನಲ್ಲಿ ಗಲಾಟೆಯಾಗಿದೆ ಗೊತ್ತಿಲ್ಲ.

ಈ ಮುಂಚೆ ಆರೋಪಿತರು ಚಾಸಾ-1 ರವರ ವಿರುದ್ಧ ಒಂದು ಪ್ರಕರಣ ಸಲ್ಲಿಸಿದ್ದರು ಎಂದರೆ ಸರಿ. ಆ ಪ್ರಕರಣ ಮುಕ್ತಾಯಗೊಂಡಿದೆ ಎಂದರೆ ಸರಿ. ಚಾಸಾ-1 ರವರ ಆರೋಪಿತರ ಮೇಲಿನ ದ್ವೇಷದಿಂದಾಗಿ ಈ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿರುವುದಿಲ್ಲ, ಚಾಸಾ-1 ರವರು ಆರೋಪಿತರಿಗೆ ಹಲ್ಲೆ ಮಾಡಿದ್ದು, ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಜಮೀನು ವಿಚಾರವಾಗಿ

ಆರೋಪಿತರು ಹಾಗೂ ನಮ್ಮ ನಡುವೆ ವಿವಾದಗಳಿವೆ ಎಂದರೆ ಸರಿ. ಆ ಒಂದು ಕಾರಣದಿಂದಾಗಿ ಆರೋಪಿತರ ವಿರುದ್ಧ ಈ ಸುಳ್ಳು ದೂರು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಆರೋಪಿತರು ಮುದ್ದೆಮಾಲುಗಳಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಚಾಸಾ-1ರವರೇ ಪೋಲಿಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ದಿನ ಬಾಲಾಜಿರೆಡ್ಡಿರವರು ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ, ಆತನ ಅಣ್ಣ ಮತ್ತು ನಾನು ಸೇರಿ ಆರೋಪಿತರ ಮೇಲೆ ಸುಳ್ಳು ದೂರು ನೀಡಿ, ಅವರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮನ್ನು ಯಾರೂ ಸಹ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಬೈರೆಡ್ಡಿ ನಮ್ಮ ಬಾವ. ಆತ ಗ್ರಾಮಪಂಚಾಯತಿ ಸದಸ್ಯ ಎಂದರೆ ಸರಿ. ಜಮೀನು ವಿಚಾರವಾಗಿ ಆರೋಪಿ ಹಾಗೂ ನಮ್ಮ ನಡುವೆ ಜಗಳಗಳಾಗುತ್ತವೆ ಎಂದರೆ ಸರಿ. ನಾವೆಲ್ಲರೂ ಸೇರಿ ಆರೋಪಿತರ ಮೇಲೆ ಗಲಾಟೆ ಮಾಡಿದ್ದೇವೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾವು ನ್ಯಾಯಾಲಯಕ್ಕೆ ಬರುತ್ತಿದ್ದೆವು ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.